## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀಮತಿ ಬಲ್ಕೀಸ್ ಬಾನು
(ವಿಧಾನಸಭೆಯಿಂದ ಚುನಾಯಿತರಾದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 238

ಉತ್ತರಿಸಬೇಕಾದ ದಿನಾಂಕ : 16-07-2024

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಹಕಾರ ಇಲಾಖೆಯಲ್ಲಿ ಅಲ್ಪಸಂಖ್ಯಾತರ ಸಮುದಾಯದವರುಗಳಿಗೆ ಜಾಗೃತಿ ಮೂಡಿಸಲು ರೂಪಿಸಲಾದ ಯೋಜನೆಗಳಾವುವು:(ವಿವರ ನೀಡುವುದು) | ಸಹಕಾರ ಇಲಾಖೆಯಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ/ಹಿಂದುಳಿದ/ಅಲ್ಪಸಂಖ್ಯಾತ/ಅಲೆಮಾರಿ ಜನಾಂಗದ ವರ್ಗದವರನ್ನು/ಮಹಿಳೆಯರನ್ನು/ ವಿಕಲಚೇತನರನ್ನು ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವವರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸಹಾಯಧನ (ರಾಜ್ಯ ಯೋಜನೆ) ಮಂಜೂರಾತಿ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಈ ಯೋಜನೆಯನ್ವಯ ಅಲ್ಪಸಂಖ್ಯಾತ ಸಮುದಾಯದವರನ್ನು ಸಹ ಸಹಕಾರ ಸಂಘಗಳಲ್ಲಿ ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನವನ್ನು ನೀಡಲಾಗುತ್ತದೆ. ಇದರಿಂದ ಅಲ್ಪಸಂಖ್ಯಾತರನ್ನು ಸಹಕಾರ ಕ್ಷೇತ್ರದ ಮುಖ್ಯವಾಹಿನಿಗೆ ತಂದು ಅವರುಗಳಿಗೆ ಸಹಕಾರ ಸಂಘಗಳಿಂದ ಸಿಗುವ ಸೌಲಭ್ಯಗಳು ದೊರೆಯಲು ಸಹಕಾರಿಯಾಗುತ್ತದೆ. |

| | | |
|---|---|---|
| ಆ) | ಸರ್ಕಾರ ಸಂಸ್ಥೆ/ಬ್ಯಾಂಕುಗಳಲ್ಲಿ ಅಲ್ಪಸಂಖ್ಯಾತರ ಸಮುದಾಯದವರಿಗೆ ಶೇರು ಸಹಾಯಧನ ಹಾಗೂ ಶೇರು ಧನ ಹೆಚ್ಚಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಎಲ್ಲಾ ವಿಧದ ಸಹಕಾರ ಸಂಘಗಳಲ್ಲಿ ಅಲ್ಪಸಂಖ್ಯಾತರನ್ನು ಸದಸ್ಯರನ್ನಾಗಿ ನೋಂದಾಯಿಸಲು ಸರ್ಕಾರದಿಂದ ಷೇರು ಸಹಾಯಧನವನ್ನು ಭರಿಸುವ ಯೋಜನೆಯಡಿಯಲ್ಲಿ ಸಹಕಾರ ಸಂಘದ ಷೇರು ಮೊತ್ತ ಅಥವಾ ಗರಿಷ್ಟ ರೂ.500/-ಗಳ ಷೇರು ಮೊತ್ತವನ್ನು ಸರ್ಕಾರದಿಂದ ನೀಡಲಾಗುತ್ತದೆ. ಈ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀಡಿರುವ ಅನುದಾನ ವಿವರ ಈ ಕೆಳಕಂಡಂತೆ ಇರುತ್ತದೆ. |

| ವರ್ಷ | ಅನುದಾನದ ಮೊತ್ತ (ರೂ.ಲಕ್ಷಗಳಲ್ಲಿ) | ಅಲ್ಪಸಂಖ್ಯಾತರ ಸಂಖ್ಯೆ |
|---|---|---|
| 2021–22 | 32.64 | 7033 |
| 2022–23 | 10.93 | 2286 |
| 2023–24 | 9.50 | 1996 |

ಷೇರು ಸಹಾಯಧನ ಹಾಗೂ ಷೇರು ಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

**ಸಂಖ್ಯೆ: ಸಿಐ 153 ಸಿಎಲ್‌ಎಸ್ 2024**

K.N. Rajanna

**(ಕೆ.ಎನ್.ರಾಜಣ್ಣ)**
**ಸಹಕಾರ ಸಚಿವರು**